*ಮಲ್ಲಿಕಾರ್ಜುನ, ಗಿರಗಾಂವ*
*ನಗುವ ಹೆಣ್ಣನ್ನು, ಅಳುವ ಗಂಡನ್ನು ನಂಬಬಾರದು ಅಂತಾರಲ್ಲಾ, ಏಕಿರಬಹುದು?*



ಸುಳ್ಳು ಸುಳ್ಳೇ ಟೂತ್ ಪೇಸ್ಟ್ ಮತ್ತು ಪೇಯ್ನ ಬಾಮ್ ಗಳ ಜಾಹಿರಾತು ನೀಡುವರೆಂದು!

*ಅನುಜಿತ್ ಬಿ.ಜೆ. ತಲವಾಟ*
*ವಿದ್ಯಾಭ್ಯಾಸ ಮುಂದುವರಿದಂತೆ ಪುಸ್ತಕದ ಹೊರೆ ಮತ್ತು ಶಿಕ್ಷೆ ಕಡಿಮೆ ಆಗುವುದು ಏಕೆ?*
ಮಸ್ತಕದಿ ಸ್ಟಾಕ್ ಹೆಚ್ಚೆ ಪುಸ್ತಕದ ಹೊರೆ ಕಡಿಮೆ; ರೆಟ್ಟೆ ಬಲಿತಿರೆ ಶಿಕ್ಷೆ ನೀಡುವಗೆ ಬಲು ಭಯವು!

*ಶ್ರೀಮತಿ ಸುನಂದಮ್ಮ, ಗೌರಿಬಿದನೂರು*
*ಜನರು ಗಣಪತಿಯನ್ನು ಪೂಜಿಸುತ್ತಾರೆ, ಇಲಿಯನ್ನು ದ್ವೇಷಿಸುತ್ತಾರೆ. ಏಕೆ?*
ದೊಡ್ಡವರ ಜೊತೆ ಇರುವ ಸಣ್ಣವರದು ಕಿರಿಕಿರಿ, ಕಬಳಿಕೆ ಹೆಚ್ಚಾದ್ದರಿಂದ!

*ಗೀತಾ ಬರ್ಲ, ಬೆಂಗಳೂರು*
*ಸದಾ ಕುಡಿದು ತೂರಾಡುತ್ತಾ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಗಂಡನಿಗೆ ನಿಮ್ಮ ಕಿವಿಮಾತು?*



ಕಿವಿಮಾತು? ಅಷ್ಟು ಕುಡಿದವನಿಗೆ ಮೆಗಾಫೋನ್‌ನಲ್ಲಿ ಅರಚಿದರೂ ಕೇಳಿಸದು; ವೃಥಾ ಕಂಠಶೋಷಣೆಯಷ್ಟೆ.

*ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ*
*ಹುಡುಗಿ ನೋಡಲು ಹೋದಾಗ ಬಾರೋ ಕೃಷ್ಣಯ್ಯ ಹಾಡು ಹೇಳಿದಳಲ್ಲಾ...?*
ಸರಿ ಬಿಡಿ; ನಿಮ್ಮ ಕೃಷ್ಣಲೀಲೆಗಳೆಲ್ಲಾ ಜಗಜ್ಜಾಹೀರಾಗಿದೆ ಎಂದಾಯಿತು!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*
*ಅಲ್ಲಣ್ಣ! ಹೆಣ್ಣು, ಹೊನ್ನು, ಮಣ್ಣು ಇವುಗಳನ್ನು ಕಣ್ಣೆತ್ತಿಯೂ ನೋಡದವರು ಇದ್ದಾರೆಯೇ?*
ಆ ಮೂರಕ್ಕಿಂತಲೂ ಎತ್ತರದಲ್ಲಿ ನಿಂತಿರುವರಾರೂ ಇವುಗಳನ್ನು ಕಣ್ಣೆತ್ತಿ ನೋಡುವುದಿಲ್ಲ; ಕಣ್ಣಿಳಿಸಿಯೇ ನೋಡುತ್ತಾರೆ!

*ಕೃಷ್ಣಮೂರ್ತಿ ಮನ್ನಾರ್, ಶಿರಸಿ*
*ಜೀವನದಲ್ಲಿ, ವ್ಯವಹಾರದಲ್ಲಿ ಕಾಮ-ಕ್ರೋಧಗಳು ಅಗತ್ಯವಲ್ಲವೇ?*
ಅತಿ ಸರ್ವತ್ರ ವರ್ಜಯೇತ್ ಅಷ್ಟೆ; ಮಿತಿಯಲ್ಲಿ ಷಡ್ವರ್ಗಗಳೂ ಅಗತ್ಯ.

*ಎಂ.ಆರ್. ಪವನ್ ಕುಮಾರ್, ಬಳ್ಳಾರಿ*
*ರಸದಿಂದ ಕಸ ತೆಗೆಯುವವರಿಗೂ, ಕಸದಿಂದ ರಸ ತೆಗೆಯುವವರಿಗೂ ಏನು ವ್ಯತ್ಯಾಸ?*
ಮೊದಲಿನವರು ಜ್ಯೂಸ್ ಅಂಗಡಿ ಇಡುತ್ತಾರೆ, ಎರಡನೆಯವರು ಕಸ ವಿಲೇವಾರಿ ಕಾಂಟ್ರಾಕ್ಟ್ ಹಿಡಿಯುತ್ತಾರೆ.

*ನೆ.ಸು.ಆನಂದ, ಕತ್ರಿಗುಪ್ಪೆ*
*ನನ್ನ ಗೆಳೆಯ ಸಂತೋಷಕುಮಾರ ಸಂತೋಷವಾಗಿಯೂ ಇಲ್ಲ, ಕುಮಾರನೂ ಅಲ್ಲವಲ್ಲಾ...?*
ಕತ್ರಿಗುಪ್ಪೆಯಲ್ಲಿ ಕತ್ತರಿಗಳ ಗುಪ್ಪೆ ಇದೆಯೇ? ಸಾಗರದಲ್ಲಿ ಸಾಗರ? ಹೆಸರೇ ಬೇರೆ, ವ್ಯಕ್ತಿತ್ವವೇ ಬೇರೆ.

*ಪ್ರ.ಶಿ. ಶೆಟ್ಟಿ, ಮಂಗಳೂರು*
*ಭೂಮಿ ಹುಟ್ಟಿ 500 ಕೋಟಿ ವರ್ಷ, ಮನುಷ್ಯ ಹುಟ್ಟಿ ಕೇವಲ 5 ಲಕ್ಷ ವರ್ಷ. ಇಷ್ಟು ಕೋಟಿ ವರ್ಷಗಳು ದೇವನೇನು ಮಾಡುತ್ತಿದ್ದ?*
ಮಾನವನು ಗ್ರಹಪ್ರವೇಶ ಮಾಡಲೆಂದು ಭೂಮಿಯನ್ನು ನಿರ್ಮಾಣ ಮಾಡುತ್ತಿದ್ದ!

*ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು*
*ಮದುವೆ ಇಲ್ಲದವರಿಗೆ ಆಗಿಲ್ಲವೆಂಬ ಒಂದೇ ಚಿಂತೆ; ಆದವರಿಗೆ...?*
ಅಯ್ಯೋ, ಆಗಿಬಿಟ್ಟೆವಲ್ಲಾ ಎಂದು ಒಂದೇ ಸಮನೆ ವ್ಯಥೆ!

*ಸುನೀಲ್ ಜೋಷಿ, ಹೂವಿನಹಡಗಲಿ*
*ಮಕ್ಕಳಲ್ಲಿಯೂ ಮುಗ್ಧತೆ ಮಾಯವಾಗುತ್ತಿದೆಯಲ್ಲಾ...?*
ಹೊಸದೇನಲ್ಲ; ಅಭಿಮನ್ಯುವಿಗೆ ಕೊಲ್ಲುವ ವಿದ್ಯೆ ಗರ್ಭದಲ್ಲೇ ತಿಳಿದಿತ್ತು!

*ಗಾಯತ್ರಿ, ರಾಜಾಜಿನಗರ*
*ಕುಡಿತ, ಜೂಜು. ಲಂಚ ಈ ಮೂರನ್ನೂ ಮುಟ್ಟಬೇಡ ಎಂದರೂ ಮುಟ್ಟುತ್ತೀನಿ ಅಂತ ಹೊರಟವರಿಗೆ...?*
ಅಬ್ಕಾರಿ ಸಚಿವನ ಸ್ಥಾನ ನೀಡಿರಿ.

## ಬಹುಮಾನಿತ ಪ್ರಶ್ನೆ

*ಚಾರ್ಲ್ಸ್ ಫರ್ನಾಂಡಿಸ್, ಹುಬ್ಬಳ್ಳಿ*
*ರೆಡ್ಡಿ, ಚಡ್ಡಿಗಳ ಸುಳಿಯಲ್ಲಿ ಕಡ್ಡಿಯಂತೆ ಅಸಹಾಯಕ ಯಡ್ಡಿ ಮಡ್ಡಿಯಾಗದಿರಲು ಬಡ್ಡಿಯೇನು ಶಿವಾ?*
ಬೀಸುಗಾಳಿಗೆ ಬೀಳುತೇಲುತ ಗಣಿಯ ಮೇಗಡೆ ಹಾಯಲಿ!

*ಎಚ್. ಆರ್. ದೇಸಾಯಿ, ರಾಯಚೂರು*
*ರಾಜಕಾರಣಿಗಳಿಗೇಕೆ ಬಾರಹ್ ಖೂನ್ ಮಾಫ್ ಕಾಯಿದೆ?*
ತೇರಹ್, ಚೌದಹ್‌ಗಳನ್ನು ಮಾಡಲು ಅವಕಾಶ ಕೊಡಬೇಕಲ್ಲ!

*ಮಾಲತಿರಾಜು, ಬೆಂಗಳೂರು*
*ಹೆಂಗಸರು ಮಗುವನ್ನು ಸೊಂಟದಲ್ಲಿರಿಸಿಕೊಂಡು ಓಡಾಡುವ ಪರಿಪಾಠ ದೂರವಾಗುತ್ತಿದೆಯಲ್ಲಾ?*
ಗೋಡೆಯಂತೆ ನೇರವಾದ ಸೊಂಟದಲ್ಲಿ ಮಗುವನ್ನು ವಾಸ್ತು ಪ್ರಕಾರ ಕೂಡಿಸಿಕೊಳ್ಳಲಾಗುವುದಿಲ್ಲವಂತೆ!

*ಪಿ.ವಿ. ಆಚಾರ್ಯ, ಹೆಬ್ಬಾಳ*
*ರೂಪಾಯಿ ಚಿಹ್ನೆ ಹಾಗೂ ನಗರಗಳ ಹೆಸರನ್ನು ಬದಲಾಯಿಸಿದ ಮಾತ್ರಕ್ಕೆ ನಮ್ಮ ದೇಶದ ಅದೃಷ್ಟ ಖುಲಾಯಿಸಬಹುದೇ?*




ರಬ್ಬರ್ ಸ್ಟ್ಯಾಂಪ್ ಮಾಡುವವರ ಮತ್ತು ಬೋರ್ಡು ಬರೆಯುವವರ ಅದೃಷ್ಟವಂತೂ ಖುಲಾಯಿಸುತ್ತದೆ!

*ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.*
*ಮಳೆ ಇಲ್ಲದೆ ಬೆಳೆಯುವ ಬೆಳೆ, ಬಂಡವಾಳವಿಲ್ಲದೆ ಸಂಪಾದಿಸುವ ವೃತ್ತಿ ಯಾವುವು?*
ಗಡ್ಡ, ರಿಯಲ್ ಎಸ್ಟೇಟ್ ಏಜೆನ್ಸಿ.

*ಎನ್. ವಸಂತಾ, ಬೆಂಗಳೂರು*
*ನಗುವವರು, ನಗಿಸುವವರು, ನಗದೇ ಇರುವವರು; ಯಾರು ಹಿತವರು ನಿಮಗೆ ಈ ಮೂವರೊಳಗೆ?*
ನಗದೇ ಇರುವವರು ಅವರಲ್ಲಿರುವ ನಗದೇ (cahsಏ) ಇನ್ನಿಬ್ಬರ ಜೀವಾಳ!

■ ರಾಮ್